ಅಧ್ಯಕ್ಷರು : ಅರ್ಜಿಯನ್ನೊಪ್ಪಿಸಲಾಯಿತು.

(ಇ) **ಶ್ರೀ ಕೆ. ಪ್ರಭಾಕರ ಬಂಗೇರರವರ ಅರ್ಜಿ.**

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗೆ ನೇರವಾಗಿ (ಖಾಸಗಿಯಾಗಿ) ಹಾಜರಾಗುವ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸುವ ಬಗ್ಗೆ ಸದನಕ್ಕೆ ಅರ್ಜಿ ಒಪ್ಪಿಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನೊಂದು ನಿಲುವಳಿ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು : ಆಯಿತು ತಾವು ಮಾತನಾಡಿ.

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ : ಬೆಂಗಳೂರು ಸುತ್ತಮುತ್ತ ಭೂಸ್ವಾಧೀನದಲ್ಲಿ ಬಹಳಷ್ಟು ಹಗರಣಗಳು ನಡೆದಿರುವ ಬಗ್ಗೆ ಮತ್ತು ನೈಸ್ ಕಂಪನಿಯವರು ಜಾಸ್ತಿ ಭೂಮಿಯನ್ನು ಸ್ವಾದೀನಪಡಿಸಿ ಕೊಂಡಿರುವುದನ್ನು ತನಿಖೆ ಮಾಡಲು ಕಮಿಟಿಯನ್ನು ನೇಮಕ ಮಾಡಿರುವುದರ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಕಳೆದ ಸಲ ಈ ಶಾಸನಸಭೆಯಲ್ಲಿ ಬೆಂಗಳೂರು ಸುತ್ತಮುತ್ತ ಭೂಮಿಯನ್ನು ಸ್ವಾಧೀನ ಮಾಡಬೇಕಾದರೆ ಬಹಳ ಹಗರಣಗಳು ನಡೆದಿದೆ ಎಂದು ನಾನು ಹೆಚ್ಚು ಮಾತನಾಡಿದ್ದೆ ಮತ್ತು ತಾವೂ ಕೂಡ ಆ ದಿವಸ ಬಹಳ ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಸರ್ಕಾರ ಅಂಥ ಘಟನೆ ಯಾವುದೂ ನಡೆದಿಲ್ಲ, ನಡೆದಿದ್ದರೆ ನಾವು ತನಿಖೆ ಮಾಡಿಸುತ್ತೇವೆ ಎಂದು ಇಲ್ಲಿ ಹೇಳಿ ಆ ದಿವಸ ಏತಕ್ಕೋ ಗೊತ್ತಿಲ್ಲ ಆತುರವಾಗಿ ಓಡಿ ಹೋಗಿಬಿಟ್ಟರು. ಒಂದು ಸಮಾಧಾನ ಅಂದರೆ ಸರ್ಕಾರ ಅದನ್ನು ಒಪ್ಪಿದೆ. ಒಂದು ತಜ್ಞರ ಸಮಿತಿಯನ್ನು ನೇಮಿಸಿ ವರದಿ ತರಿಸಿಕೊಂಡು ಬೆಂಗಳೂರಿನಲ್ಲಿ ಕೆಲವು ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಜಮೀನನ್ನು ಸ್ವಾಧೀನ ಮಾಡಿಸಿಕೊಂಡಿದ್ದು ಸತ್ಯ. ಅದನ್ನು ನಾವು ಬೇರೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಈಗ ಸರ್ಕಾರದವರು ಒಪ್ಪಿದ್ದಾರೆ. ಅದಕ್ಕಾಗಿ ಮಾನ್ಯ ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಆಗಿತ್ತು. ಅದರ ವರದಿಯನ್ನು ನಾವು ಇಲ್ಲಿ ಕೊಡಿ ಎಂದು ಕೇಳಿದೆವು. ಅವರು ಕೊಡಲಿಲ್ಲ. ಸಂತೋಷ. ಆದರೆ, ಅದರ ಮೇಲೆ ಒಂದು ಗೌರ್ನಮೆಂಟ್